1	2	3	4	5
14. Impts. to Road from Vaddahalli to Chikkagondrahally.	40%	0.50	0.50	Completed
15. Impts. to Road from Laxmidevanakote to Nelamachanahally.	40%	0.75	0.20	Completed

ANNEXURE - 2

List of Incomplete Works

1. Thimmasandra, Maniganahalli, Kotegundlu, Gadigavarahally Watershed works	:	0.75
2. Road from Kavalaganahalli to Gangadhareshwara Temple Konapalli	:	0.50
3. Impts. to Road from S.K. Road Gudamaralahalli	:	0.50
4. Impts. to Road from Nandenahosalli to Yeramaradhihally	:	0.50
		8.25

ಶಿವಮೊಗ್ಗ ತಾಲ್ಲೂಕಿನಲ್ಲಿ ಸಸಿಗಳ ವಿತರಣೆ

1035 (1069) ಶ್ರೀ ಹೆಚ್. ಚಂದ್ರಶೇಖರಪ್ಪ (ಶಿವಮೊಗ್ಗ) : ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ತಾಲ್ಲೂಕಿನಲ್ಲಿ 1998-1999 ಹಾಗೂ 1999-2000ನೇ ಸಾಲಿನಲ್ಲಿ ಎಷ್ಟು ಸಸಿಗಳನ್ನು ನೆಡಸಲಾಗಿದೆ? ಅವುಗಳನ್ನು ನೆಡಲು ಆದ ವೆಚ್ಚವೆಷ್ಟು?

ಆ) ಅರಣ್ಯ ಇಲಾಖೆಯಿಂದ ಮುಟ್ಟುಗೋಲು ಹಾಕಿಕೊಂಡ ವಾಹನಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕ್ರಮ ಕೈಗೊಂಡಿದೆಯೆ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ)

ವರ್ಷ	ನೆಟ್ಟ ಸಸಿಗಳ ಸಂಖ್ಯೆ	ವೆಚ್ಚ (ರೂ. ಲಕ್ಷಗಳಲ್ಲಿ)
1998-1999	2.133 ಲಕ್ಷ	9.670
1999-2000	1.851 ಲಕ್ಷ	8.800

ಆ) ಹೌದು, ಮುಟ್ಟುಗೋಲು ಹಾಕಿಕೊಂಡ ವಾಹನಗಳ ಶೀಘ್ರ ವಿಲೇವಾರಿಗೆ ನಿಯಮಗಳನ್ನು ಅನುಸರಿಸಿ ಕ್ರಮ ಕೈಗೊಳ್ಳಲಾಗಿದೆ.

ಮಸೀದಿಗಳ ಹಾಗೂ ಸ್ಮಶಾನದ ಅಭಿವೃದ್ಧಿ

1036 (1073) ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನಲ್ಲಿ ಮುಸ್ಲಿಂ ಬಾಂಧವರ ಮಸೀದಿಗಳಿಗೆ ಹಾಗಟ ಸ್ಮಶಾನದ ಅಭಿವೃದ್ಧಿಗೆ ಸರ್ಕಾರವು ಮಂಜೂರು ಮಾಡಿರುವ ಅನುದಾನವೆಷ್ಟು? ತಾಲ್ಲೂಕಿನ ಮಸೀದಿ ಹಾಗೂ ಸ್ಮಶಾನದ ಅಭಿವೃದ್ಧಿಗೆ ವ್ಯಯಮಾಡಿದ ಮೊತ್ತವೆಷ್ಟು

ಆ) ಮುಸ್ಲಿಂ ಬಾಂಧವರು ಮಸೀದಿಗಳು ಹಾಗೂ ಸ್ಮಶಾನಕ್ಕೆ ಸೂಕ್ತ ಕಾಂಪೌಂಡ್ ರಕ್ಷಣೆಯಲ್ಲದೇ ಮೂಕಪ್ರಾಣಿಗಳು ನುಗ್ಗಿ ಹಾಳು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಮಸೀದಿಗಳಿಗೆ ಹಾಗೂ ಸ್ಮಶಾನಕ್ಕೆ ಸೂಕ್ತ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿ ಈ ಬಾಂಧವರಿಗೆ ಅನುಕೂಲ ಮಾಡಿ ಕೊಡುವುದು ಯಾವಾಗ?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ಸಹಾಯಾನುದಾನ ಸಂಹಿತೆಯ ನಿಯಮಾನುಸಾರ ಪ್ರತಿಯೊಂದು ಜಿಲ್ಲೆಗೆ ಮತ್ತು ತಾಲ್ಲೂಕಿಗೆ ನಿಗದಿತ ಮೊತ್ತವನ್ನು ಮೀಸಲಿಡಲು ಅವಕಾಶವಿರುವುದಿಲ್ಲ. ಆದರೂ ತುಮಕೂರು ಜಿಲ್ಲೆಗೆ 6-15 ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗಿದೆ. ಈ ಉದ್ದೇಶಕ್ಕಾಗಿ ಕೊರಟಗೆರೆ ತಾಲ್ಲೂಕಿಗೆ 75,000-00 ರೂ.ಗಳನ್ನು ಮಂಜೂರು ಮಾಡಲಾಗಿದೆ.

ಆ) ಇಲ್ಲ

ಇ) ಸರ್ಕಾರವು ಅನುದಾನವನ್ನು ವಕ್ಫ್ ಸಂಸ್ಥೆಗಳಿಗೆ ಸಂಬಂಧಪಟ್ಟ ಮುತಾವಳಿಗಳಿಂದ ಪ್ರಸ್ತಾವನೆಯನ್ನು ಸ್ವೀಕರಿಸಿದ ಮೇಲೆ ಸಹಾಯಾನುದಾನ ಸಂಹಿತೆಯ ನಿಯಮಾನುಸಾರ ಮಂಜೂರು ಮಾಡುತ್ತದೆ.